ಆ) ಆಯವ್ಯಯ ಪಟ್ಟಿಯಲ್ಲಿ ಸೇರಿರುವ ಕೆಲಸಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಕೊಡಲಾಗಿದೆ.—

	೧೯೮೪–೮೫		೧೯೮೫–೮೬		೧೯೮೬–೮೭	
	ಕಾರ್ಯಾರಂಭವಾಗುವ ಕೆಲಸಗಳ ಸಂಖ್ಯೆ	ಅನುದಾನ ಖರ್ಚು	ಕಾರ್ಯಾರಂಭವಾಗುವ ಕೆಲಸಗಳು	ಅನುದಾನ ಖರ್ಚು	ಕಾರ್ಯಾರಂಭವಾಗುವ ಕೆಲಸಗಳು	ಅನುದಾನ ಖರ್ಚು
		(ಲಕ್ಷ ರೂ.ಗಳಲ್ಲಿ)		(ಲಕ್ಷ ರೂ.ಗಳಲ್ಲಿ)		(ಲಕ್ಷ ರೂ.ಗಳಲ್ಲಿ)
ರಸ್ತೆ	೨೩	೧೨.೮೫	೧೩.೩೧	೨೧	೭.೧೪	೪.೩೮	೨೦	೯.೩೮	೫.೦೦
ಸೇತುವೆ	೪	೧೦.೯೨	೫.೧೫	೯	೧೪.೦೫	೫.೯೮	೮	೧೨.೯೦	೪.೭೪
ಕೆರೆಗಳು	೨	೧.೫೦	೦.೬೦	೨	೦.೯೫	೦.೭೦	೨	೧.೧೦	೦.೧೦

ಶ್ರೀವಂತಿ ಸುವರ್ಣಾವಸಂತ್.—ಸನ್ಮಾನ್ಯ ಅಧ್ಯಕ್ಷರೇ, ವೀರಾಜಾಪೇಟೆ ತಾಲ್ಲೂಕಿನಲ್ಲಿ ೧೯೮೪–೮೫ರಲ್ಲಿ ೧೦, ೧೯೮೫–೮೬ರಲ್ಲಿ ೩, ಮತ್ತು ೧೯೮೬–೮೭ರಲ್ಲಿ ೬ ಕೆರೆಗಳನ್ನು ಕೊಟ್ಟಿದ್ದೀರಿ. ಆದರೆ ಇಲ್ಲಿ ಕಾರ್ಯಾರಂಭ ಮಾಡಿದ ಕೆರೆಗಳ ಸಂಖ್ಯೆ ೧೯೮೪–೮೫ರಲ್ಲಿ ೨ ೧೯೮೫–೮೬ರಲ್ಲಿ ೨, ಮಂತ್ತು ೧೯೮೬–೮೭ರಲ್ಲಿ ೨ ಆಗಿದೆ. ಇದರಲ್ಲಿ ಎಷ್ಟು ಕೆರೆಗಳನ್ನು ಸಂಪೂರ್ಣ ಮಾಡಿದ್ದೀರಿ ಎಂದು ಕೇಳಂತ್ತೇನೆ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಅಲ್ಲಿರತಕ್ಕಂಥಾದ್ದು ಎಲ್ಲಾ ಸಣ್ಣ ಸಣ್ಣ ಕೆರೆಗಳು. ದೊಡ್ಡ ಕೆರೆಗಳು ಯಾವುದೂ ಇಲ್ಲ ಇಲ್ಲಿ ಬಂದಿರತಕ್ಕಂಥಾದ್ದು ಇಂಪ್ರೂವ್‌ಮೆಂಟ್ ಮತ್ತೊಂದು ಏನೂ ಕೆಲಸ ಮಾಡುತ್ತೇವೆ, ಆ ಕೆಲಸಗಳಿಗೆ ಕೊಟ್ಟಿರತಕ್ಕಂಥ ಹಣದ ವಿಚಾರ. ಇದಕ್ಕೆ ೧೯೮೪-೮೫ರಲ್ಲಿ ೧.೫೦ ಲಕ್ಷ ರೂಪಾಯಿಗಳನ್ನ ಕೊಟ್ಟಿದ್ದೇವೆ, ಆದರಲ್ಲಿ ೬೦ ಸಾವಿರ ಖರ್ಚಾಗಿದೆ. ೧೯೮೫–೮೬ನೇ ವರ್ಷದಲ್ಲಿ ೯೫ ಸಾವಿರ ಕೊಟ್ಟಿದ್ದೇವೆ, ಆದರಲ್ಲಿ ೭೦ ಸಾವಿರ ಖರ್ಚಾಗಿದೆ. ೧೯೮೬–೮೭ರಲ್ಲಿ ೧.೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ೧೦ ಸಾವಿರ ಖರ್ಚಾಗಿದೆ. ನಿಷ್ಮ್ ಕ್ಷೇತ್ರದಲ್ಲಿ ಒಂದು ಕಡೆ ನಾನು ಹೋಗಿ ನೋಡಿದೆ. ತೋಡು ಎಂದು ಹೇಳಿ ಇದೆ ಅಲ್ಲಿ ಸುಮಾರು ಮೂರು ಸಾವಿರ ಎಕರೆ ಭೂಮಿಗೆ ನೀರಾವರಿ ಪ್ರಯೋಜನ ಆಗುತ್ತದೆ. ಎಂದು ಹೇಳಿ ತೋರಿಸಿದರು. ಅಲ್ಲಿ ಲಕ್ಷ್ಮೀತೀರ್ಥ ಎನ್ನುವ ಒಂದು ಹೊಳೆಯ ಬ್ಯಾಕ್ ವಾಟರ್, ರಿವರ್ ಬೆಡ್‌ಗಿಂತ ಜಾಸ್ತಿ ಇಲ್ಲದೆ ಎರಡು ಒಂದೇ ಸಮನೆ ಇರುವುದರಿಂದ ಒಳಗಡೆ ಹಳ್ಳಗಳು ಜಾಯಿನ್ ಆಗಿರತಕ್ಕಂಥ ಜಾಗದಲ್ಲಿ ರಿವರ್ ಎತ್ತರವಾಗಿದೆ. ಇದರಿಂದ ಸುಮಾರು ೩ ಸಾವಿರ ಎಕರೆ ಜಮೀನಿಗೆ ತೊಂದರೆ ಯಾಗಂತ್ತದೆಂದು ಸಹ ಅಲ್ಲಿನ ಜನ ನನಗೆ ತೋರಿಸಿದರು. ಆ ಬಗ್ಗೆ ಕೂಡಲೇ ಸೂಕ್ತ ಕ್ರಮ ತೆಗೆದು ಕೊಳ್ಳಿ ಎಂದು ನಾನು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಅಧಿಕಾರಿಗಳು ಈಗ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ನಾನು ತಮಗೆ ಕೊಟ್ಟಿರುವ ಉತ್ತರ ಸಣ್ಣ ಸಣ್ಣ ರಿವೇರಿ ಕೆಲಸಗಳಿಗೆ ಸಂಬಂಧಪಟ್ಟಿದ್ದುದು. ಅಲ್ಲಿನ ರೈತರಿಗೆ ಅಪಾಯವಿದೆ ಎಂದು ಸಹ ನಾನು ಕೇಳಿರುವುದರಿಂದ ಆ ಬಗ್ಗೆ ಮಾಹಿತಿಯನ್ನು ಅಧಿಕಾರಿಗಳಿಂದ ತರಿಸಿಕೊಂಡು ಯಾವುದಾದರೊಂದು ರೂಪದಲ್ಲಿ ಹಣವನ್ನು ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ ೨೧೩ (೬೪೦)

(ಮಾನ್ಯ ಸದಸ್ಯರು ಗೈರು ಹಾಜರು)

ರಾಜ್ಯದಲ್ಲಿರುವ ತಾಂತ್ರಿಕ ವಿದ್ಯಾಲಯಗಳು

೩೯೨. ಶ್ರೀ ಜಿ. ರಾಜುಗೌಡರ (ಹನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತಾಂತ್ರಿಕ ವಿದ್ಯಾಲಯಗಳು (ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಷನ್) ಸಂಖ್ಯೆ ಎಷ್ಟು ?

ಅ) ಇವುಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ವಿದ್ಯಾಲಯಗಳ ಸಂಖ್ಯೆ ಎಷ್ಟು ?

ಇ) ಒಂದು ವರ್ಷಕ್ಕೆ ಎಷ್ಟು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶ ಇದೆ ?

ಈ) ಖಾಸಗಿಯವರಂ ನಡೆಸುತ್ತಿರುವ ವಿದ್ಯಾಲಯಗಳಲ್ಲಿ ಪಾಠಪ್ರವಚನಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಲು ವ್ಯವಸ್ಥೆ ಒಗ್ಗೆ ಸರ್ಕಾರದವರು ಏನಾದರೂ ಹತೋಟಿ ಇಟ್ಟಿದ್ದಾರೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೬-೮೭ನೇ ಸಾಲಿಗೆ ಇರುವ ಪಾಲಿಟೆಕ್ನಿಕ್‌ಗಳ ಸಂಖ್ಯೆ ೧೫೭. ಅವರ ವಿವರ ಕೆಳಕಂಡಂತೆ ಇದೆ.

೧)	ಸರ್ಕಾರಿ	—೩೨
೨)	ಅನುದಾನಿತ	—೮
೩)	ಖಾಸಗಿ	—೧೧೭
	ಒಟ್ಟು	—೧೫೭

ಆ) (ಅ) ರಲ್ಲಿ ನಮೂದಿಸಿರುವಂತೆ.

ಇ) ೧೫೭ ಪಾಲಿಟೆಕ್ನಿಕ್‌ಗಳಲ್ಲಿನ ಪ್ರವೇಶ ಸಂಖ್ಯೆ ೨೧,೨೬೦

ಈ) ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಶಿಕ್ಷಣದ ಗುಣಮಟ್ಟ ಪರೀಕ್ಷಿಸಲು ತಾಂತ್ರಿಕ ಶಿಕ್ಷಣ ಮಂಡಳಿ ಇವರಿಂದ ಪ್ರತಿ ವರ್ಷ ಎರಡು ಮೂರು ತಜ್ಞರ ಸಮಿತಿ ರಚನೆ ಮಾಡಲಾಗುತ್ತಿದೆ, ಈ ತಜ್ಞರ ಸಮಿತಿಗಳು ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಭೇಟಿ ಮಾಡಿ ಅಲ್ಲಿ ಇರುವ ಸೌಲಭ್ಯಗಳನ್ನು ಪರೀಕ್ಷಿಸಿ ಗುಣಮಟ್ಟ ಕಾಪಾಡಲು ವರದಿ ಸಲ್ಲಿಸುತ್ತಾರೆ. ಇದನ್ನು ಸಂಬಂಧಪಟ್ಟ ಪ್ರಿನ್ಸಿಪಾಲರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ ಖಾಸಗಿಯವರು ನಡೆಸುತ್ತಿರುವಂತಹ ಶಿಕ್ಷಣ ಸಂಸ್ಥೆಗಳಲ್ಲಿ ಪಾಠಪ್ರವಚನಗಳು ಸರಿಯಾಗಿಲ್ಲ. ವಿದ್ಯಾಭ್ಯಾಸದ ಗುಣಮಟ್ಟ ದಿನೇ ದಿನೇ ಹದಗೆಡುತ್ತಿದೆ. ಇದನ್ನು ಸುಧಾರಿಸುವುದಕ್ಕೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ? ಉದಾಹರಣೆಯಾಗಿ ೧೫೭ ವಿದ್ಯಾ ಸಂಸ್ಥೆಗಳಲ್ಲಿ ಒಂದು ವರ್ಷದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನು ಮುಗಿಸಿ ಹೊರಗಡೆ ಬರುತ್ತಿದ್ದಾರೆ ? ಅವರಲ್ಲಿ ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ ನಿರುದ್ಯೋಗಿಗಳಾಗಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಮಂಜುನಾಥ್.—ಸ್ವಾಮಿ ಎಷ್ಟು ಜನ ಖಾಸಗಿಯವರ್ತಾರೆ, ಎಷ್ಟು ಜನರಿಗೆ ಉದ್ಯೋಗ ಸಿಗುತ್ತದೆ ಎನ್ನುವ ಮಾಹಿತಿ ಈಗ ನನ್ನ ಹತ್ತಿರ ಇಲ್ಲ ಒಟ್ಟಿನಲ್ಲಿ ಹೇಳುವುದಾದರೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟವನ್ನು ಕಾಪಾಡಬೇಕೆನ್ನುವ ದೃಷ್ಟಿಯಿಂದಲೇ ಒಂದು ಸಲವಲ್ಲ, ಎರಡು ಸಲವಲ್ಲ ಮೂರು ಸಲ ನಾವು ಎಕ್ಸ್‌ಪರ್ಟ್ ಕಮಿಟಿಯನ್ನು ಅಲ್ಲಿಗೆ ಕಳುಹಿಸಿಕೊಡುತ್ತೇವೆ. ಆದಾಗ್ಯೂ ಕೂಡ ಅವರು ಗುಣಮಟ್ಟವನ್ನು ಸರಿಯಾಗಿ ಕಾಪಾಡಲಿಲ್ಲವೆಂದರೆ ಆಗ ಡೀರೆಕಗ್‌ನೈಜ್ ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ.—ಖಾಸಗಿ ಶಿಕ್ಷಣ ಸಂಸ್ಥೆಗಳು ಇವೊತ್ತು ವ್ಯಾಪಾರೀ ಸಂಸ್ಥೆಗಳಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವಾಗ ನೆರೆ ರಾಜ್ಯಗಳವರು ತನಿಖೆಯನ್ನು ಮಾಡಿಸಿ, ತನಿಖೆಯ ವರದಿ ಬಂದ ಮೇಲೆ ಅವರಿಗೆ ಪರ್ಮಿಶನ್ ಕೊಡುತ್ತಿದ್ದಾರೆ. ಅದೇ ರೀತಿಯ ಸೂತ್ರವನ್ನು ತಾವು ಸಹ ಇಲ್ಲಿ ಅಳವಡಿಸಿಕೊಳ್ಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ನಾವು ಸಹ ಅದೇ ರೀತಿಯ ವ್ಯವಸ್ಥೆಯನ್ನು ಅಳವಡಿಸಿದ್ದೇವೆ. ಖಾಸಗಿಯವರು ಸಲ್ಲಿಸಿದಂತಹ ಅಪ್ಲಿಕೇಶನ್ ಅನ್ನು ಎಕ್ಸ್‌ಪರ್ಟ್ ಕಮಿಟಿಗೆ ಕಳುಹಿಸಿಕೊಡುತ್ತೇವೆ. ಅವರು ಸರ್ಕಾರಕ್ಕೆ ತಮ್ಮ ವರದಿಯನ್ನು ಕೊಟ್ಟ ಮೇಲೆ ನಾವು ಅವರಿಗೆ ಒಂದು ಲೆಟರ್ ಆಫ್ ಇಂಡೆಂಟ್ ಕೊಡುತ್ತೇವೆ. ಆ ಪ್ರಕಾರ ಅವರು ನಡೆದುಕೊಂಡರೆ ಮಾತ್ರ ಅವರಿಗೆ ನಾವು ಪರ್ಮಿಶನ್

ಕೊಡುವುದು ಇಲ್ಲದಿದ್ದರೆ ಇಲ್ಲ. ಈಗ ತಮಗೆ ನಾನು ಒಂದು ಮಾತನ್ನು ಹೇಳುವುದಾದರೆ ಪಾಲಿಟೆಕ್ನಿಕ್‌ಗಳಿಗೆ ಅರ್ಜಿಗಳು ಬರುತ್ತಲೇ ಕಡಿಮೆಯಾಗಿದೆ.

ಶ್ರೀ ಜಿ. ರಾಜಗೌಡ.—ಇನ್ನು ಮುಂದೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಡುವುದಿಲ್ಲ ವೆಂದು ಭರವಸೆ ಕೊಡುತ್ತೀರಾ ? ಈಗಾಗಲೇ ಖಾಸಗಿ ಪಾಲಿಟೆಕ್ನಿಕ್‌ಗಳು ಚಾಸ್ತಿಯಾಗಿವೆ ಇವುಗಳ ಗುಣಮಟ್ಟ ಕಡಿಮೆಯಾಗಿದೆ. ಆದ್ದರಿಂದ ಇನ್ನು ಮುಂದೆ ಖಾಸಗಿಯವರಿಗೆ ಅನುಮತಿ ಕೊಡುವುದಿಲ್ಲ ವೆಂದು ಖಚಿತ ಭರವಸೆ ಕೊಡುತ್ತೀರಾ ?

ಶ್ರೀ ಡಿ. ಮಂಜುನಾಥ್.— ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದವರೇ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಖಾಸಗಿ ಶಿಕ್ಷಣಸಂಸ್ಥೆಗಳು ಚೆನ್ನಾಗಿ ನಡೆಸುತ್ತಿವೆ. ಒಳ್ಳೆಯ ಗುಣ ಮಟ್ಟವನ್ನು ಕಾಪಾಡಿಕೊಂಡು ಬರುತ್ತಿವೆ ಅಂತಹ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬಾರದೆಂದು ಹೇಳಿದರೆ ಹೇಗೆ? ಮಾನ್ಯ ಸದಸ್ಯರ ಗಮನಕ್ಕೆ ಮತ್ತೊಂದು ವಿಚಾರವನ್ನು ತರಬಯಸುವುದೇ ನೆಂದರೆ ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯ ಪ್ರಕಾರ ನಾವೂ ಸಹ ನಡೆಯಬೇಕಾಗುತ್ತದೆ. ಖಾಸಗಿಯವರು ಚೆನ್ನಾಗಿ ಈ ಸಂಸ್ಥೆಗಳನ್ನು ನಡೆಸಿದರೆ ಅವರಿಗೆ ನಾವು ಪ್ರೋತ್ಸಾಹ ಕೊಡಬೇಕಾ ಗುತ್ತದೆ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ ೨೧೫. ಮಾನ್ಯ ಸದಸ್ಯರಾದ ಅಜ್ಜಿಬಾಳ ಹೆಗಡೆಯವರ ಪ್ರಶ್ನೆ ಯನ್ನು ಮುಂದೂಡಲಾಗಿದೆ. ಪ್ರಶ್ನೆ ೨೧೬ ಮಾನ್ಯ ಸದಸ್ಯರು ಗೈರು ಹಾಜರಿ.

ಕೃಷಿ ಬೆಳೆಗಳಿಗೆ ನ್ಯಾಯ ಬೆಲೆಗಳನ್ನು ನಿಗದಿಪಡಿಸುವುದು

*೫೦೦. ಶ್ರೀ ಎಂ. ಎಸ್. ಕೃಷ್ಣಪ್ಪ (ರಾಜಾಜಿನಗರ).— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ಕೃಷಿ ಬೆಳೆಗಳಾದ ಭತ್ತ, ಜೋಳ, ಹತ್ತಿ ಮತ್ತು ಕಬ್ಬುಗಳಿಗೆ ಸರ್ಕಾರದವರು ನಿಗದಿ ಮಾಡಿರುವ ಬೆಲೆಗಳೇನು,

ಆ) ಈ ಬೆಲೆಗಳು ರೈತನ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿರುವುದೂ, ಆದರಿಂದ ರೈತನಿಗೆ ನಷ್ಟವಾಗಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಇ) ನ್ಯಾಯವಾದ ಬೆಲೆಗಳನ್ನು ನಿಗದಿಮಾಡಿ ಸರ್ಕಾರವೇ ಕೊಂಡು ವಂಧ್ಯವರ್ತಿಗಳಿಲ್ಲದೆ, ಬೇರೆಯವರಿಗೆ ಮಾರಲು ಸರ್ಕಾರದವರು ಯೋಚಿಸಿದ್ದಾರೆಯೆ,

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?